## ಕರ್ನಾಟಕ ಸರ್ಕಾರ

## ಆಯುಕ್ತರ ಕಛೇರಿ ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ,ಬೆಂಗಳೂರು-01.

ಸಂಖ್ಯೆ: ಸಿ8(3)/ಶಾ.ಶಿ.ಅ/ಖಾ.ಹು.ಭ/2026-27/E-1582755 ದಿನಾಂಕ:23-06-2026

### ಸುತ್ತೋಲೆ

ವಿಷಯ: ರಾಜ್ಯ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ನಿಧನ, ನಿವೃತ್ತಿ, ರಾಜೀನಾಮೆ ಮತ್ತು ಇತರ ಕಾರಣಗಳಿಂದ ತೆರವಾದ ಹುದ್ದೆಗಳನ್ನು ಭರ್ತಿ ಮಾಡಲು ಆನ್‌ಲೈನ್ ಪ್ರಕ್ರಿಯೆಯಲ್ಲಿ ಅನುಸರಿಸುವ ಕ್ರಮಗಳ ಕುರಿತು

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ ಇಡಿ 14 ಎಸ್ ಇ ಪಿ 2017 ದಿ: 25-09-2018.

2. ಸರ್ಕಾರದ ಆದೇಶ ಸಂಖ್ಯೆ ಇಪಿ 396 ಎಸ್ ಇ ಎಸ್ 2021 ದಿ: 07-08-2024.
3. ಈ ಕಚೇರಿ ಸುತ್ತೋಲೆ ಸಂಖ್ಯೆ: ಇ-ಆಡಳಿತ/ಇಇಡಿಎಸ್/ಶಿಕ್ಷಕ ಮಿತ್ರ/2020-21 ದಿ:30-09-2024.
4. ಕರ್ನಾಟಕ ಶಿಕ್ಷಣ ಕಾಯ್ದೆ 1983 ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ನೇಮಕಾತಿ ಸೇವಾ ಷರತ್ತು ನಿಯಮ 1999ರ ಅನುಬಂಧ-4
5. ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ 388 ಸೆನನಿ 2024 ದಿ:25-11-2024.
6. ಈ ಕಛೇರಿ ಪತ್ರ ಸಂಖ್ಯೆ: ಸಿ8(1)ಶಾ.ಶಿ.ಅಖಾಹುಭ ಇ1507537/2024-25 ದಿ:31-12-2024
7. ಮಾನ್ಯ ಜಂಟಿ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಇವರ: ಅನಧಿಕೃತ ಟಿಪ್ಪಣಿ ಸಂಖ್ಯೆ-SWD/4879 /SLP/2024 2018-02-2025.
8. ಈ ಕಛೇರಿ ಪತ್ರ ಸಂಖ್ಯೆ: ಸಿ8(1) ಶಾಶಿಅಖಾಹುಭ 01/2024-25 ದಿ:28-02-2025.
9. ಸರ್ಕಾರದ ಆದೇಶದ ಸಂಖ್ಯೆ: ಸಿಆಸುಇ 01ಸಹಿಮ 2026 ದಿನಾಂಕ: 27-02-2026.
10. ಸರ್ಕಾರದ ಆದೇಶದ ಸಂಖ್ಯೆ: ಸಿಆಸುಇ 02ಸಹಿಮ 2026 ದಿನಾಂಕ: 13-05-2026.
11. ಈ ಕಛೇರಿ ಪತ್ರ ಸಂಖ್ಯೆ:ಸಿ8(3)/ಅನು.ಶಾ.ಹು.ಭ/2025-26/E-2164867 ದಿನಾಂಕ:16-05-2026.
12. ಈ ಕಛೇರಿಯ ಜ್ಞಾಪನಾ ಸಂಖ್ಯೆ: ಸಂಖ್ಯೆ: ಸಿ8(3)/ಶಾ.ಶಿ.ಅ.ಖಾ.ಹು 02/2024-25 ದಿನಾಂಕ:05-06-2026.

**************************************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿನ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ದಿನಾಂಕ: 01-01-2016 ರಿಂದ 31-12-2020 ರವರೆಗೆ ನಿಧನ, ನಿವೃತ್ತಿ, ರಾಜೀನಾಮೆ ಮತ್ತು ಇತರ ಕಾರಣಗಳಿಂದ ತೆರವಾದ ಹುದ್ದೆಗಳನ್ನು ಭರ್ತಿ ಮಾಡಲು ಉಲ್ಲೇಖ(2)ರ ಸರ್ಕಾರದ ಆದೇಶದಲ್ಲಿ ಅನುಮತಿ ನೀಡಲಾಗಿದೆ. ಸದರಿ ಆದೇಶದಲ್ಲಿ ಅನುದಾನಿತ ಪ್ರೌಢಶಾಲೆಗಳ ಖಾಲಿ ಹುದ್ದೆ ಭರ್ತಿ ಪ್ರಕ್ರಿಯೆಯನು ಆನ್‌ಲೈನ್ ತಂತ್ರಾಂಶದ ಮೂಲಕ ನಿರ್ವಹಿಸಲು ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ಪ್ರಸ್ತಾವನೆಗಳನ್ನು ವ್ಯವಹರಿಸಲು ನಿರ್ದೇಶಿಸಲಾಗಿದೆ. ಈ ಹಿನ್ನೆಲೆಯಲ್ಲಿ ಖಾಸಗಿ ಅನುದಾನಿತ ಪ್ರೌಢಶಾಲೆಗಳ ನೇಮಕಾತಿ ಪ್ರಕ್ರಿಯೆಯನ್ನು ಆನ್ ಲೈನ್ ಮುಖಾಂತರ ನಿರ್ವಹಿಸಲು ಕ್ರಮವಹಿಸಲಾಗುತ್ತಿದೆ.

ಉಲ್ಲೇಖ(11)ರ ಈ ಕಛೇರಿಯ ಸುತ್ತೋಲೆಯಲ್ಲಿ ದಿನಾಂಕ: 31-12-2015ರ ಪೂರ್ವದಲ್ಲಿನ ಅರ್ಹ ಖಾಲಿ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಲು ಅನುಮತಿ ಕೋರಿ ಪ್ರಸ್ತಾವನೆಗಳನ್ನು ಸಲ್ಲಿಸಲು ದಿನಾಂಕ: 15-07-2026 ರವರೆಗೆ ಕಾಲಾವಕಾಶ ನೀಡಲಾಗಿದೆ. ಸದರಿ 31-12-2015ರ ಪೂರ್ವದಲ್ಲಿನ ಅರ್ಹ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ಕೋರಿ ಪ್ರಸ್ತಾವನೆಯನ್ನು ತಂತ್ರಾಂಶದಲ್ಲಿಯೇ ಸಲ್ಲಿಸಬೇಕಾಗಿರುತ್ತದೆ ಎಂದು ಸ್ಪಷ್ಟಪಡಿಸಲಾಗಿದೆ.

ದಿನಾಂಕ: 13-05-2026 ರ ಸರ್ಕಾರದ ಆದೇಶದನ್ವಯ ಮೀಸಲಾತಿಗೆ ಸಂಬಂಧಿಸಿದಂತೆ ನಿಯಮಗಳನ್ನು ರೂಪಿಸಿ 400 ಬಿಂದುಗಳ ರೋಸ್ಟರ್ ಪಟ್ಟಿಯನ್ನು ನೀಡಲಾಗಿದೆ. ಅದರಂತೆ ತಂತ್ರಾಂಶವನ್ನು ಸಿದ್ಧಪಡಿಸಲಾಗಿದ್ದು ಈಗಾಗಲೇ ಆಡಳಿತ ಮಂಡಳಿಯವರು ತಂತ್ರಾಂಶದಲ್ಲಿ ನಮೂದಿಸಿ ಇಂಧೀಕರಿಸಿರುವ ಮಾಹಿತಿಯನ್ನು ಮತ್ತೊಮ್ಮೆ ದಿನಾಂಕ:13-05-2026 ರ ಸರ್ಕಾರದ ಆದೇಶದಂತೆ ಖಾಲಿ ಹುದ್ದೆಗಳಿಗೆ ಬಿಂದುಗಳನ್ನು ಆಯ್ಕೆ ಮಾಡಿ ಇಂಧೀಕರಿಸಿ, ಸದರಿ ಖಾಲಿ ಹುದ್ದೆಗಳ ಬಿಂದುಗಳಿಗೆ ಸಂಬಂಧಿಸಿದಂತೆ ಯಾವುದೇ ಬದಲಾವಣೆಗಳಿದ್ದಲ್ಲಿ ಸಭಾ ನಡಾವಳಿಗಳನ್ನು ಪುನರ್ ಅಳವಡಿಸಬೇಕಾಗಿದ್ದು. ಈ ಕುರಿತು ತಂತ್ರಾಂಶದಲ್ಲಿ ಪರಿಷ್ಕರಿಸಲು ಅವಕಾಶಗಳನ್ನು ಕಲ್ಪಿಸಲಾಗಿತ್ತು.

SCAN AnyScanner

ಉಲ್ಲೇಖ(12)ರಲ್ಲಿ ಸರ್ಕಾರದ ಆದೇಶ ಸಂಖ್ಯೆ ಸಿ.ಆಸುಇ 02ಸೆಹಿಮ 2026 ದಿನಾಂಕ:13-05-2026 ರಲ್ಲಿನ ನಿರ್ದೇಶನದಂತೆ ತಂತ್ರಾಂಶದಲ್ಲಿ ರೋಸ್ಟರ್ ಬಿಂದುಗಳ ಟೇಬಲ್‌ಗಳನ್ನು ಅಳವಡಿಸಿ ಶಾಲಾ ಆಡಳಿತ ಮಂಡಳಿಗಳು ಖಾಲಿ ಇರುವ ಹುದ್ದೆಗಳಿಗೆ ಅನ್ವಯವಾಗುವ ಬಿಂದುವನ್ನು ಆಯ್ಕೆ ಮಾಡಿ ಇಂಧೀಕರಿಸಲು ಅನುವು ಮಾಡಲಾಗಿದ್ದು, ಅದರಂತೆ ಆಡಳಿತ ಮಂಡಳಿಗಳು ಕ್ರಮವಹಿಸಲು ತಿಳಿಸಿದೆ.

ಮುಂದುವರೆದು ಪ್ರಸ್ತುತ ಶಾಲಾ ಆಡಳಿತ ಮಂಡಳಿಗಳಿಗೆ ಖಾಲಿ ಹುದ್ದೆ ಭರ್ತಿ ಅನುಮತಿ ಕೋರಿ ತಂತ್ರಾಂಶದಲ್ಲಿ ಇಂಧೀಕರಿಸಿರುವ ಪ್ರಸ್ತಾವನೆಗಳನ್ನು ಮತ್ತೊಮ್ಮೆ ಪರಿಶೀಲಿಸಿ ಆಯಾ ಅಯುಕ್ತಾಲಯ/ಅಪರ ಅಯುಕ್ತರ ಕಛೇರಿಗಳಿಗೆ ಸಲ್ಲಿಸಲು ತಂತ್ರಾಂಶದಲ್ಲಿ ಅನುವು ಮಾಡಿಕೊಡಲಾಗಿದ್ದು. ಶಾಲಾ ಆಡಳಿತ ಮಂಡಳಿಗಳು ಸದರಿ ಪ್ರಸ್ತಾವನೆಗಳನ್ನು ತಂತ್ರಾಂಶದ ಮೂಲಕ ಸಲ್ಲಿಸಲು ತಿಳಿಸಿದೆ.

ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ

ಗೆ,

1. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ ಮತ್ತು ಧಾರವಾಡ, ರವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ನಾಲ್ಕು ವಿಭಾಗದ ವಿಭಾಗೀಯ ಸಹನಿರ್ದೇಶಕರುಗಳಿಗೆ.
3. ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ.
4. ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.
5. ಸಂಬಂಧಿಸಿದ ಅನುದಾನಿತ ಪ್ರೌಢಶಾಲಾ ಆಡಳಿತ ಮಂಡಳಿಗಳಿಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಅಗತ್ಯ ಕ್ರಮಕ್ಕಾಗಿ.

ಪ್ರತಿಗಳು,

1. ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ರವರಿಗೆ ಮಾಹಿತಿಗಾಗಿ ಗೌರವಗಳೊಂದಿಗೆ.
2. ಕಛೇರಿ ಪ್ರತಿ.

AnyScanner